ಕೆಲವು ಕಾಲ ಅಧ್ಯಾತ್ಮಸಾಧನೆ ಮಾಡಿದರು. ಆ ಸಮಯದಲ್ಲಿ ಅವರಿಗೆ ಬೃಂದಾವನಕ್ಕೆ ಹೋಗಿ ಅಲ್ಲಿ ತಪಸ್ಸು ಮಾಡಬೇಕೆನಿಸಿತು. ಆಗ ಶ್ರೀರಾಮಕೃಷ್ಣರು ಖಾಯಿಲೆಯಿಂದ ಕಾಶಿಪುರದ ಉದ್ಯಾನಗೃಹದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಯೋಗಿನ್‌ಮಾ ಒಪ್ಪಿಗೆಯನ್ನು ಕೋರಿದಾಗ, ಅವರು ಆಶೀರ್ವದಿಸಿ, ಶ್ರೀಮಾತೆಯವರ ಒಪ್ಪಿಗೆಯನ್ನೂ, ಆಶೀರ್ವಾದವನ್ನೂ ಪಡೆಯಲು ಹೇಳಿದರು. ಇದೇ ಶ್ರೀರಾಮಕೃಷ್ಣರೊಂದಿಗೆ ಯೋಗಿನ್‌ಮಾರ ಕಡೆಯ ಸಂದರ್ಶನ. ಬೃಂದಾವನದಲ್ಲಿ ಅವರು ತಪಸ್ಸು ಮಾಡುತ್ತಿರುವಾಗ, ಅವರಿಗೆ ಶ್ರೀರಾಮಕೃಷ್ಣರ ದೇಹತ್ಯಾಗದ ಸುದ್ದಿ ತಿಳಿದುಬಂತು. ಸ್ವಲ್ಪ ದಿನಗಳಲ್ಲೇ ಶ್ರೀಮಾತೆಯವರು ಕೂಡ ಬೃಂದಾವನಕ್ಕೆ ಬಂದರು. ಇಬ್ಬರ ಸಂದರ್ಶನವಾದಾಗ, ಅವರಿಬ್ಬರ ದುಃಖಕ್ಕೆ ಎಲ್ಲೆಯೇ ಇರಲಿಲ್ಲ. ಇಡೀ ದಿನ ಕಣ್ಣೀರು ಸುರಿಸುತ್ತಾ ಗೋಳಾಡುತ್ತಿದ್ದರು. ಆಗ ಒಂದು ದಿನ ಶ್ರೀರಾಮಕೃಷ್ಣರು ಇವರಿಗೆ ದರ್ಶನ ಕೊಟ್ಟು, "ಏಕೆ ಹೀಗೆ ಅಳುತ್ತಿದ್ದೀರಾ? ನಾನೆಲ್ಲಿ ಹೋಗಿರುವೆ. ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ಮಾತ್ರ ಅಲ್ಲವೇ?" ಎಂದರು. ಈ ದರ್ಶನದಿಂದ ಇಬ್ಬರಿಗೂ ಸ್ವಲ್ಪ ಸಮಾಧಾನವಾಯಿತು. ಬೃಂದಾವನದಲ್ಲಿ ಜಪಸಾಧನೆಗಳನ್ನು ಮಾಡುತ್ತಾ ಯೋಗಿನ್‌ಮಾ ಆಗಾಗ್ಗೆ ಸಮಾಧಿಗೆ ಹೋಗುತ್ತಿದ್ದರು. ಸ್ವಲ್ಪ ಕಾಲದ ನಂತರ ತಮ್ಮ ಸ್ವಂತ ತಾಯಿಯ ಸೇವೆ ಮಾಡಲು ಅವರು ಕೊಲ್ಕತಾಗೆ ಹಿಂದಿರುಗಿದರು.

ಹೊರನೋಟಕ್ಕೆ ಯೋಗಿನ್‌ಮಾ ಗೃಹಸ್ಥರಾಗಿದ್ದರೂ, ಮನಸ್ಸಿನಲ್ಲಿ ತ್ಯಾಗ, ವೈರಾಗ್ಯ, ಸೇವಾಭಾವನೆಗಳು ತುಂಬಿಕೊಂಡಿದ್ದವು. ಶ್ರೀರಾಮಕೃಷ್ಣ ಮಹಾಸಂಘದ ಸಾಧುಗಳನ್ನು ಅವರು ತಮ್ಮ ಮಕ್ಕಳ ಹಾಗೆ ಕಾಣುತ್ತಿದ್ದರು. ಅವರು ಶ್ರೀಕೃಷ್ಣನ ಆರಾಧನೆ ಮಾಡುತ್ತಿದ್ದರು. ಅವರ ಮಗಳು ಗಾನು ದೇಹತ್ಯಾಗ ಮಾಡಿದಳು. ಆಗ ಅವಳ ಮಕ್ಕಳನ್ನು ಸಾಕುವ ಜವಾಬ್ದಾರಿ ಯೋಗಿನ್‌ಮಾರ ಮೇಲೆ ಬಿತ್ತು. ಬಹಳ ಪ್ರೀತಿಯಿಂದ ಆ ಮಕ್ಕಳನ್ನು ಪೋಷಿಸಿದರು. ಇದಕ್ಕೆ ಸ್ವಾಮಿ ಶಾರದಾನಂದರು ಕೂಡ ಬೆಂಬಲವಿತ್ತರು. ಆ ಮಕ್ಕಳಲ್ಲಿ ಒಬ್ಬರು ಮುಂದೆ ರಾಮಕೃಷ್ಣ ಸಂಘದ ಸಾಧುಗಳಾದರು. ಯೋಗಿನ್‌ಮಾ ಶ್ರೀಮಾತೆಯವರೊಡನೆ ನೀಲಾಂಬರಬಾಬುವಿನ ತೋಟದಲ್ಲಿ ಪಂಚತಪ ಮಾಡಿದರು. ಇವರಿಗೆ ಆಲಸ್ಯವೆಂಬುದೇ ಇರಲಿಲ್ಲ. ಗಡಿಯಾರದ ಮುಳ್ಳಿನಂತೆ ನಿಯಮಿತ ವೇಳೆಗೆ ತಮ್ಮ ಕೆಲಸಗಳನ್ನೆಲ್ಲಾ ಮಾಡಿ ಮುಗಿಸುತ್ತಿದ್ದರು. ಇಷ್ಟೆಲ್ಲಾ ಮಾಡಿದರೂ ಒಂದು ದಿನವಾದರೂ ಅವರ ಜಪತಪಗಳಿಗೆ ಕುಂದು ಬರುತ್ತಿರಲಿಲ್ಲ. ಶ್ರೀಮಂತ ಮನೆತನದಲ್ಲಿ ಹುಟ್ಟಿ, ಶ್ರೀಮಂತ ಪತಿಯನ್ನು ಪಡೆದು, ಕಡೆಯ ಕಾಲದಲ್ಲಿ ಅವರಿಗೆ ಲಭ್ಯವಾದ ಅಲ್ಪಸ್ವಲ್ಪ ನಿವೃತ್ತಿವೇತನದಿಂದಲೇ ಸಂಸಾರ ನಡೆಸುತ್ತಿದ್ದರು. ಅದರಲ್ಲೇ ಉಳಿತಾಯ ಮಾಡಿ ಬಡಬಗ್ಗರಿಗೆ ಸಹಾಯ ಮಾಡುತ್ತಿದ್ದರು.

೧೯೨೦ ರಲ್ಲಿ ಶ್ರೀಮಾತೆಯವರ ದೇಹತ್ಯಾಗದ ನಂತರ, ಯೋಗಿನ್‌ಮಾ ಬಹಳ ದುಃಖಿತರಾದರು. ೧೯೨೨ ರಲ್ಲಿ ಸ್ವಾಮಿ ಬ್ರಹ್ಮಾನಂದರು ಮತ್ತು ತುರೀಯಾನಂದರು ದೇಹತ್ಯಾಗ ಮಾಡಿದರು. ಇದಾದ ಮೇಲೆ ಯೋಗಿನ್‌ಮಾ ಅವರ ದೇಹಾರೋಗ್ಯ ಕೆಡುತ್ತ ಹೋಯಿತು. ಆದರೆ ಜಪತಪಗಳ ನಿಯಮವನ್ನು ಅವರು ಎಂದಿಗೂ ಕಡೆಗಣಿಸುತ್ತಿರಲಿಲ್ಲ. ಇವರು ಆಗಾಗ್ಗೆ ಭಾವಸಮಾಧಿಗೆ ಹೋಗುತ್ತಿದ್ದರು. ಕಡೆಯ ದಿನಗಳಲ್ಲಿ ಯಾವ ರೀತಿಯ ಆಹಾರವನ್ನೂ ತೆಗೆದುಕೊಳ್ಳಲಿಲ್ಲ, ಅವರಿಗೆ ಬಾಹ್ಯಜ್ಞಾನವೂ ಇರಲಿಲ್ಲ. ೧೯೨೪ರ ಜೂನ್ ೨೪ರಂದು, ಶ್ರೀರಾಮಕೃಷ್ಣರು ಕೊಟ್ಟ ಆಶ್ವಾಸನೆಯಂತೆ, ಪೂರ್ಣಜ್ಞಾನದ ನೆಲೆಯಲ್ಲಿ, ಪರಬ್ರಹ್ಮದಲ್ಲಿ ಲೀನರಾದರು.

ಶ್ರೀಶಾರದಾಮಠದ ಪ್ರಥಮ ಅಧ್ಯಕ್ಷರಾದ ಪ್ರವ್ರಾಜಿಕಾ ಭಾರತೀಪ್ರಾಣಾ ಮಾತಾಜಿಯವರು, ಅನೇಕ ವರ್ಷಗಳ ಕಾಲ ಯೋಗಿನ್‌ಮಾರವರ ಸಂಪರ್ಕದಲ್ಲಿ ಇದ್ದರು ಮತ್ತು ಕಡೆಯ ದಿನಗಳಲ್ಲಿ ಅವರ ಸೇವೆಯನ್ನೂ ಮಾಡಿದರು. ಅವರು ಯೋಗಿನ್‌ಮಾರವರ ಬಗ್ಗೆ ಹೀಗೆ ಹೇಳುತ್ತಾರೆ: ಯೋಗಿನ್‌ಮಾ ಕೊಲ್ಕತಾದ ಬಾಗ್‌ಬಜಾರ್ ಬಡಾವಣೆಯಲ್ಲಿ ವಾಸಿಸುತ್ತಿದ್ದರು. ಬೆಳಗಿನ ಜಾವ ಎದ್ದು, ಶ್ರೀಮಾತೆಯವರು ಸ್ನಾನ ಮಾಡುತ್ತಿದ್ದ ಗಂಗಾನದಿಯ ಘಾಟಿಗೇ ಹೋಗಿ ಅಲ್ಲಿ ಸ್ನಾನ ಮಾಡುತ್ತಿದ್ದರು. ಅದಾದ ಮೇಲೆ ಪ್ರತಿದಿನ ಬೆಳಗ್ಗೆ ಹತ್ತು ಅಥವಾ ಹತ್ತೂವರೆ ಗಂಟೆಯ ತನಕ ಜಪಧ್ಯಾನಗಳನ್ನು ಮಾಡುತ್ತಿದ್ದರು. ಆ ಸಮಯದಲ್ಲಿ ಅವರ ಎರಡು ಕಣ್ಣುಗಳೂ ಕೆಂಪಾಗಿ, ಓಲಾಡುತ್ತಿದ್ದವು.

ಅನಂತರ ಅವರು ಶ್ರೀಮಾತೆಯವರು ವಾಸ ಮಾಡುತ್ತಿದ್ದ ಉದ್ಬೋಧನಕ್ಕೆ ಬರುತ್ತಿದ್ದರು. ಬಂದಕೂಡಲೇ ಆಸನವನ್ನು ಒಂದೆಡೆ ಇಟ್ಟು, "ಎಲ್ಲಿದ್ದೀಯಮ್ಮಾ, ರಾಜನಂದಿನಿ" ಎಂದು ಶ್ರೀಮಾತೆಯವರನ್ನು ಕರೆಯುತ್ತಿದ್ದರು. ಶ್ರೀಮಾತೆಯವರಿಗೆ ನಮಸ್ಕರಿಸುತ್ತಿದ್ದರು. ಈ ಸುಸಮಯಕ್ಕೋಸ್ಕರ ಶ್ರೀಮಾತೆಯವರೂ ಕಾಯ್ದುಕೊಂಡಿರುತ್ತಿದ್ದರು. ಇವರಿಗೆ ಆಲಸ್ಯವೆಂಬುದೇ ಇರಲಿಲ್ಲ, ಯಾವಾಗಲೂ ಕಾರ್ಯನಿರತರಾಗಿರುತ್ತಿದ್ದರು. ಅವರು ಎಂತಹ ಚಳಿ ಅಥವಾ ಬಿಸಿಲಿದ್ದರೂ ಚಪ್ಪಲಿಯನ್ನು ಹಾಕುತ್ತಿರಲಿಲ್ಲ ಮತ್ತು ಛತ್ರಿಯನ್ನು ಉಪಯೋಗಿಸುತ್ತಿರಲಿಲ್ಲ. ಸಂಧ್ಯಾಸಮಯದಲ್ಲಿ ಅವರು ಶ್ರೀರಾಮಕೃಷ್ಣರ ಆರತಿಯನ್ನು ಉದ್ಬೋಧನದಲ್ಲಿ ಬಹಳ ಕಾಲ, ನಿಧಾನವಾಗಿ ಮಾಡುತ್ತಿದ್ದರು. ಶ್ರೀಮಾತೆಯವರು ಅಷ್ಟು ಹೊತ್ತೂ ಅಲ್ಲೇ ಕುಳಿತಿರುತ್ತಿದ್ದರು. ಶ್ರೀಮಾತೆಯವರು 'ಜಗದ್ಧಾತ್ರಿ', 'ರಾಜರಾಜೇಶ್ವರಿ' ಎಂಬ ಅನುಭೂತಿ ಯೋಗಿನ್‌ಮಾರಿಗೆ ಸಂಪೂರ್ಣವಾಗಿ ಆಗಿತ್ತು. ಗೃಹಸ್ಥರಾದರೂ ಪರಿಪೂರ್ಣ ಆಧ್ಯಾತ್ಮಿಕ ಬಾಳನ್ನು ನಡೆಸಿದ ಯೋಗಿನ್‌ಮಾರವರ ಜೀವನ ಪ್ರತಿಯೊಬ್ಬರಿಗೂ ಒಂದು ಆದರ್ಶವೇ ಸರಿ. ✷

ಅನುರಾಧ ವಸಂತಕುಮಾರ್

# ಶ್ರೀಮಾತೆಯವರ ಅಂಗರಕ್ಷಕಿ ಗೋಲಾಪ್‌ಮಾ



ಶ್ರೀಮಾತೆಯವರ ಇನ್ನೊಬ್ಬ ಸಖಿಯಾದ ಗೋಲಾಪ್‌ಮಾ ಕೂಡ ಕೌಟುಂಬಿಕ ತಾಪತ್ರಯದಲ್ಲಿ ನೊಂದವರೇ. ಆದರೆ ನಂತರದ ದಿನಗಳಲ್ಲಿ ಶ್ರೀಮಾತೆ ಶ್ರೀಶಾರದಾದೇವಿಯವರನ್ನು ಜಾಗರೂಕತೆಯಿಂದ ನೋಡಿಕೊಂಡ ಮಹಾಮಹಿಳೆ ಈಕೆ. ಇವರ ಜೀವನ ವೃತ್ತಾಂತವನ್ನು ಸರಳವಾಗಿ, ಮನಮುಟ್ಟುವಂತೆ ವಿವರಿಸಿರುವ ಲೇಖಕಿ ಬೆಂಗಳೂರಿನ ಶ್ರೀಶಾರದಾಮಠದ ನಿಕಟ ಭಕ್ತರಲ್ಲಿ ಒಬ್ಬರು.

ಶ್ರೀ ರಾಮಕೃಷ್ಣ ಪರಮಹಂಸರ ಸಹಧರ್ಮಿಣಿಯಾದ ಶ್ರೀಮಾತೆ ಶಾರದಾ ದೇವಿಯವರ ಒಡನಾಟ ಮತ್ತು ಸಂಪರ್ಕದಲ್ಲಿ ಅತಿ ನಿಕಟವಾಗಿ ನೋಡಬಹುದಾದ ಕೆಲವೇ ಸ್ತ್ರೀಭಕ್ತರಲ್ಲಿ ಒಬ್ಬರು ಗೋಲಾಪ್‌ಮಾ.

ಪ್ರತಿಯೊಬ್ಬ ಮಾನವನು ತನ್ನ ಜೀವನದಲ್ಲಿ ಅತೀವ ಆಘಾತವಾದಾಗ ಸ್ವಾಭಾವಿಕವಾಗಿ ಭಗವಂತನ ಕಡೆಗೆ ಮುಖಮಾಡುತ್ತಾನೆ. ಅದರಂತೆಯೇ ಗೋಲಾಪ್‌ಮಾ ಸಹ ಜೀವನದ ದುಃಖದ ಮಡುವಿನಲ್ಲಿ ಯಾತನೆಪಟ್ಟು ಶ್ರೀರಾಮಕೃಷ್ಣರ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದರು. ಶ್ರೀರಾಮಕೃಷ್ಣರು ಅವರನ್ನು 'ದುಃಖಿನಿ ಬ್ರಾಹ್ಮಣಿ' ಎಂದು ಕರೆಯುತ್ತಿದ್ದರು. ಗೋಲಾಪ್‌ಮಾ ಅವರ ಹಿಂದಿನ ಹೆಸರು ಗೋಲಾಪ್‌ಸುಂದರಿ ದೇವಿ ಎಂದು. ಇವರು ಒಬ್ಬ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಬಹುಶಃ ಅವರ ಜನನ ೧೮೪೦ ರ ಕಡೆಯ ಭಾಗದಲ್ಲಿ ಆಗಿರಬಹುದು. ಅತಿ ಚಿಕ್ಕ ವಯಸ್ಸಿನಲ್ಲಿಯೇ ಬಡ ಕುಟುಂಬದಲ್ಲಿ ಅವರ ಲಗ್ನವಾಯಿತು. ಬಡಪತಿಯ ಕೈ ಹಿಡಿದ ಗೋಲಾಪ್ ಅತಿ ಕಷ್ಟದಿಂದ ಸಂಸಾರ ನಿರ್ವಹಿಸುತ್ತಿದ್ದರು. ಚಂಡಿ ಎಂಬ ಮಗಳು ಮತ್ತು ಒಬ್ಬ ಮಗನಿಗೆ ತಾಯಿಯಾದರು. ಗಂಡನ ಕಾಲಾನಂತರ ಮಕ್ಕಳನ್ನು ಇವರೇ ನೋಡಿಕೊಳ್ಳಬೇಕಾಯಿತು. ಕೆಲವು ಕಾಲವಾದ ನಂತರ ಮಗನ ಮರಣವಾಯಿತು. ನೆರೆಹೊರೆಯವರ ಸಹಾಯದಿಂದ ಹೇಗೋ ಜೀವನ ನಿರ್ವಹಿಸುತ್ತಿದ್ದರು. ಭಗವಂತನ ಕೃಪೆಯಿಂದ ಚಂಡಿಗೆ ಶ್ರೀಮಂತರ ಮನೆಯ ಹುಡುಗನ ಜೊತೆಗೆ ವಿವಾಹವಾಯಿತು. ತಾಯಿ ಗೋಲಾಪ್‌ಮಾ ಮಗಳ ವೈಭವದ ಜೀವನಕ್ಕೆ ಬೆರಗಾಗಿ ಸಂತೋಷಪಡುತ್ತಿದ್ದರು.

ಅತಿ ಕ್ಷಣಭಂಗುರವಾದ ಈ ಜೀವನದ ಅನುಭವ ಗೋಲಾಪ್‌ಮಾಗೆ ಆದದ್ದು ಅವರ ಮಗಳ ಅಕಾಲ ಮರಣದಿಂದ. ದುಃಖವನ್ನು ತಾಳಲಾರದೆ ಅತೀವವಾಗಿ ನೊಂದ ಇವರಿಗೆ ಶ್ರೀಮಾತೆಯವರ ಮತ್ತೊಬ್ಬ ನಿಕಟಭಕ್ತರಾದ ಯೋಗಿನ್‌ಮಾ ಶ್ರೀರಾಮಕೃಷ್ಣರನ್ನು ಪರಿಚಯಿಸಿ, ನೊಂದ ಹೃದಯಕ್ಕೆ ಸಾಂತ್ವನವನ್ನು ಉಂಟು ಮಾಡಿದರು. ಹೀಗೆ ಗೋಲಾಪ್ ಇಹಜೀವನದಿಂದ ಪಾರಮಾರ್ಥಿಕ ಜೀವನಕ್ಕೆ ಕಾಲಿಟ್ಟರು. ಗೋಲಾಪ್‌ಮಾಗೆ ದಾರಿದೀವಿಗೆಯಂತಿದ್ದ ಪರಮಹಂಸರು ಇವರ ದುಃಖದ ಕತೆಯನ್ನು ಆಲಿಸಿ, "ಯಾರಿಗೆ ಯಾರೂ ಇಲ್ಲವೋ ಅವರನ್ನು ಸದಾ ರಕ್ಷಿಸಲು ದೇವರು ಒಬ್ಬನಿರುವನು" ಎಂದು ಸಾಂತ್ವನ ನೀಡಿ, ನೊಂದ ಜೀವಕ್ಕೆ ಭರವಸೆಯನ್ನು ಇತ್ತರು.

ನಂತರ ೧೮೮೫ ರ ಜೂನ್ ೧೩ ರಂದು ಮತ್ತೆ ಗೋಲಾಪ್‌ಮಾ ರಾಮಕೃಷ್ಣರನ್ನು ಭೇಟಿಯಾದರು. ಆಗ ಪರಮಹಂಸರು ಈ ಲೋಕದ ನಶ್ವರತೆಯನ್ನು ಆಕೆಗೆ ಬಹಳ ಸರಳವಾಗಿ ವಿವರಿಸಿ, "ಭಗವಂತನೊಬ್ಬನೇ ಸತ್ಯ, ಉಳಿದುದೆಲ್ಲವೂ ಮಿಥ್ಯೆ. ಭಗವಂತನು ಒಂದು ದೊಡ್ಡ ಸಮುದ್ರದಂತೆ. ಅದರಲ್ಲಿ ಜೀವಿಗಳು ನೀರುಗುಳ್ಳೆಗಳಂತೆ. ಅಲ್ಲಿಯೇ ಹುಟ್ಟಿ ಅಲ್ಲಿಯೇ ನಶಿಸಿ ಹೋಗುವುವು" ಎಂದು ತಿಳಿಹೇಳಿದರು.

ಹಲವು ಬಾರಿ ಶ್ರೀರಾಮಕೃಷ್ಣರ ಭೇಟಿಯಾದ ನಂತರ, ಗೋಲಾಪ್‌ಮಾ ಅವರನ್ನು ಶ್ರೀಮಾತೆಯವರಿಗೆ ಪರಮಹಂಸರು ಪರಿಚಯ ಮಾಡಿಕೊಟ್ಟರು. ಶ್ರೀಮಾತೆಯವರ ಸಂಪರ್ಕ ಮತ್ತು ಒಡನಾಟ ದೊರಕುವುದು ಸಾಧಾರಣ ವಿಷಯವಲ್ಲ. ಶ್ರೀಮಾತೆಯವರ ವಿಶೇಷ ಕೃಪೆಯಿಂದ ಗೋಲಾಪ್‌ಮಾಗೆ ಈ ಅವಕಾಶ ದೊರಕಿತು. ಪರಮಹಂಸರು ಶ್ರೀಮಾತೆಯವರಿಗೆ, "ನಿಮಗೆ ಬ್ರಾಹ್ಮಣ ಕುಲಕ್ಕೆ ಸೇರಿದ ಒಬ್ಬ ಸಂಗಾತಿಯನ್ನು ಕಳುಹಿಸಿದ್ದೇನೆ. ಅವಳು ನಿಮ್ಮ ಜೊತೆ ಸದಾಕಾಲವೂ ಇರುತ್ತಾಳೆ. ನಿಮ್ಮ ಕೆಲಸ ಕಾರ್ಯಗಳಿಗೆ ನೆರವಾಗುತ್ತಾಳೆ. ಇನ್ನು ಮೇಲೆ ನಿಮ್ಮ ದೃಷ್ಟಿ ಅವಳ ಮೇಲೆ ಸದಾ ಇರಲಿ" ಎಂದರು. ಅಂದಿನಿಂದ ಗೋಲಾಪ್‌ಮಾ ಶ್ರೀಮಾತೆಯವರ ಅಂಗರಕ್ಷಕಿಯಾದರು. ಶ್ರೀಮಾತೆಯವರ 'ವಿಜಯ' ರಾದರು ( 'ವಿಜಯ' ಭಗವತಿ ದುರ್ಗೆಯ ಒಬ್ಬ ಸಂಗಾತಿ). ಗೋಲಾಪ್‌ಮಾ

ಶ್ರೀಮಾತೆಯ ಜತೆಯಲ್ಲಿ ೩೬ ವರ್ಷಗಳ ಕಾಲ ಅವರ ನೆರಳಿನಂತೆ ಬಾಳಿ ಬದುಕಿದರು. ಇದರ ವಿವರಣೆಯನ್ನು ಮುಂದೆ ನೋಡೋಣ.

ಶ್ರೀಮಾತೆಯವರು ದಕ್ಷಿಣೇಶ್ವರದಲ್ಲಿ ಇದ್ದಾಗ ಗೋಲಾಪ್‌ಮಾ ಹಲವಾರು ಗೃಹಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದರು. ಶ್ರೀರಾಮಕೃಷ್ಣರಿಗೆ ಊಟವನ್ನು ಸಹ ತೆಗೆದುಕೊಂಡುಹೋಗಿ ಕೊಡುತ್ತಿದ್ದರು. ಪರಮಹಂಸರು ಊಟ ಮಾಡುವುದನ್ನು ನೋಡಿ ಗೋಲಾಪ್‌ಮಾ, "ನಿಮ್ಮಲ್ಲಿರುವ ಕುಂಡಲಿನಿಯ ಶಕ್ತಿ ಹಾವಿನಂತೆ ಬಾಯಿಯ ಮೂಲಕ ಆಹಾರವನ್ನು ಸ್ವೀಕರಿಸುತ್ತಿದೆ" ಎಂದರು.

ಶ್ರೀರಾಮಕೃಷ್ಣರ ಸಾಧನೆಯನ್ನು ಸ್ವಲ್ಪಮಟ್ಟಿಗಾದರೂ ಅರ್ಥ ಮಾಡಿಕೊಂಡು ಅವರ ಆಧ್ಯಾತ್ಮಿಕಶಕ್ತಿಯ ಪ್ರಭಾವದಿಂದ ಕೃತಕೃತ್ಯರಾದವರು ಗೋಲಾಪ್‌ಮಾ. ಅನಂತರದ ಜೀವನದಲ್ಲಿ ಅವರು ಶ್ರೀರಾಮಕೃಷ್ಣರ ಮತ್ತು ಶ್ರೀಶಾರದಾದೇವಿಯವರ ಪ್ರಮುಖ ಶಿಷ್ಯರಲ್ಲೊಬ್ಬರಾದರು. "ಶ್ರೀರಾಮಕೃಷ್ಣರನ್ನು ಹೋಲುವಂತಹ ಹುಡುಗನೊಬ್ಬ ನನ್ನ ಜತೆಯಲ್ಲಿ ಓಡಾಡುತ್ತಿರುವನು" ಎಂದು ಅವರು ಹೇಳುತ್ತಿದ್ದರು. ಒಂದು ದಿವಸ ಮಧ್ಯರಾತ್ರಿಯ ಸಮಯ, ಪರಮಹಂಸರು ಸಮಾಧಿಸ್ಥರಾಗಿ ಅತ್ತಿಂದಿತ್ತ ಚಲಿಸುವಾಗ ಗೋಲಾಪ್‌ಮಾ, ಸಾಕ್ಷಾತ್ ಭಗವತಿಯೇ ಅಲ್ಲಿ ಓಡಾಡುತ್ತಿರುವಂತೆ ಕಂಡು, ಹೆದರಿದರು.

ಪರಮಹಂಸರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾದ ಗೋಲಾಪ್‌ಮಾ ಧೈರ್ಯ ಮಾಡಿ, ಅವರನ್ನು ತಮ್ಮ ಮುರುಕಲು ಮನೆಗೆ ಪದಾರ್ಪಣ ಮಾಡುವಂತೆ ವಿನಂತಿಸಿಕೊಂಡರು. ಮನೆಯಲ್ಲಿ ಆಕೆ ತಮ್ಮ ಸಹೋದರರ ಜತೆಗೆ ವಾಸಿಸುತ್ತಿದ್ದರು. 'ಶ್ರೀರಾಮಕೃಷ್ಣ ವಚನವೇದ'ದಲ್ಲಿ ಮಾಸ್ಟರ್ ಮಹಾಶಯರು ಗೋಲಾಪ್‌ಮಾ ಮನೆಗೆ ಶ್ರೀರಾಮಕೃಷ್ಣರು ಭೇಟಿ ನೀಡಿದ ವಿಷಯವನ್ನು ಹೀಗೆ ವಿವರಿಸಿರುವರು: "ಈ ದುಃಖಿನಿ ಬ್ರಾಹ್ಮಣಿಯ ಮನೆಯನ್ನು ಪವಿತ್ರಗೊಳಿಸಿದ ದಿನ ಜುಲೈ ೨೮, ೧೮೮೫. ಇಟ್ಟಿಗೆಯಿಂದ ಕಟ್ಟಿದ ಮನೆ. ಒಳಗೆ ಹೋಗಬೇಕಾದರೆ ಹಸುವಿನ ಕೊಟ್ಟಿಗೆಯನ್ನು ದಾಟಿ ಹೋಗಬೇಕು. ಭಕ್ತರೆಲ್ಲರೂ ಸಾಲುಗಟ್ಟಿ ಪರಮಹಂಸರ ದರ್ಶನ ಪಡೆಯಲು ಕಾತರರಾಗಿ ಸಾಲಾಗಿ ನಿಂತಿದ್ದರು. ಗೋಲಾಪ್ ತನ್ನ ತಂಗಿಯ ಸಹಾಯ ಪಡೆದು, ಪರಮಹಂಸರಿಗೆ ಇಷ್ಟವಾದ ಖಾದ್ಯಪದಾರ್ಥಗಳನ್ನು ತಯಾರಿಸುವ ಕಾರ್ಯದಲ್ಲಿ ನಿರತರಾಗಿದ್ದರು. ನಿಮಿಷ ನಿಮಿಷಕ್ಕೆ ಬಾಗಿಲಿನ ಬಳಿಗೆ ಹೋಗಿ, ರಾಮಕೃಷ್ಣರು ಬರುತ್ತಿರುವರೇ ಎಂದು ಎದುರುನೋಡುತ್ತಿದ್ದರು.

ಆ ಸಮಯವೂ ಬಂದಿತು. ಶ್ರೀರಾಮಕೃಷ್ಣರ ಆಗಮನವಾಯಿತು. ವಿದುರನ ಮನೆಗೆ ಶ್ರೀಕೃಷ್ಣ ಬಂದಂತೆ ಗೋಲಾಪ್‌ಮಾ ಮನೆಗೆ ಶ್ರೀರಾಮಕೃಷ್ಣರು ಬಂದರು. ಆನಂದಸಾಗರದಲ್ಲಿ ತೋಯ್ದ ಗೋಲಾಪ್ ಅತಿ ಭಾವುಕರಾಗಿ ಕಣ್ಣೀರಿಡುತ್ತ ಪರಮಹಂಸರಿಗೆ ನಮಸ್ಕರಿಸಿದರು. ಮಾಸ್ಟರ್ ಮಹಾಶಯರು ಆಕೆಯ ಭಕ್ತಿಭಾವಕ್ಕೆ ಪರವಶರಾಗಿ ಗೋಲಾಪ್‌ಗೆ ನಮಸ್ಕರಿಸಲು ಹೋದಾಗ, "ಮಗು, ಏನು ಮಾಡುತ್ತಿರುವೆ? ನಿಮ್ಮೆಲ್ಲರನ್ನೂ ಪರಮಹಂಸರ ಜೊತೆಯಲ್ಲಿ ನನ್ನ ಮನೆಯಲ್ಲಿ ನೋಡಿ ನನಗೆ ಅತೀವ ಆನಂದ ಉಂಟಾಗಿದೆ" ಎಂದು ಹೇಳಿ ಭಕ್ತಿಯಿಂದ ಅವರಿಗೇ ನಮಸ್ಕರಿಸಿದರು. ಶ್ರೀರಾಮಕೃಷ್ಣರು ಹರಕು ಚಾಪೆಯ ಮೇಲೆ ಕುಳಿತು ಗೋಲಾಪ್‌ಮಾ ನೀಡಿದ ಖಾದ್ಯ, ಸಿಹಿ ಪದಾರ್ಥಗಳನ್ನು ಸ್ವೀಕರಿಸಿ ಅವರ ದುಃಖವನ್ನು ಆನಂದಕ್ಕೆ ಪರಿವರ್ತಿಸಿದರು. ಮಾಸ್ಟರ್ ಮಹಾಶಯರು ಅಂದು ತಾವೊಬ್ಬರೇ ಪರಮಹಂಸರ ಕಾಲನ್ನು ಒತ್ತುತ್ತಿದ್ದಾಗ, ಗೋಲಾಪ್ ಮತ್ತು ಅವಳ ತಂಗಿಯನ್ನು ಮಾರ್ಥ ಮತ್ತು ಮೇರಿ ಎಂಬ ಏಸುಕ್ರಿಸ್ತನ ಶಿಷ್ಯೆಯರಿಗೆ ಹೋಲಿಸಿ, ಅವರೂ ಸಹ ಕ್ರಿಸ್ತನಿಗೆ ಇದೇ ರೀತಿ ಸೇವೆ ಮಾಡಿದರು ಎಂದು ಶ್ರೀರಾಮಕೃಷ್ಣರಿಗೆ ಹೇಳುತ್ತಾರೆ.

೧೮೮೫ ರಲ್ಲಿ ಪಾನಿಹಾಟಿ ಮತ್ತು ಮಹೇಶ್‌ನಲ್ಲಿ ನಡೆದ ರಥೋತ್ಸವಗಳಲ್ಲಿ ಶ್ರೀರಾಮಕೃಷ್ಣರ ಹಲವಾರು ಭಕ್ತರ ಜತೆ ಗೋಲಾಪ್‌ಮಾ ಸಹ ಭಾಗವಹಿಸಿದರು. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಶ್ರೀಶಾರದಾದೇವಿಯವರ ಅಂಗರಕ್ಷಕಿಯಂತೆ ಗೋಲಾಪ್‌ಮಾ ಇರುತ್ತಿದ್ದರು. ೧೮೮೬ ರ ಆಗಸ್ಟ್ ಕೊನೆಯ ಭಾಗದಲ್ಲಿ ರಾಮಕೃಷ್ಣರ ಶಿಷ್ಯರಾದ ಬಲರಾಮಬಾಬು ಶ್ರೀಮಾತೆಯವರಿಗೆ ತೀರ್ಥಯಾತ್ರೆಯನ್ನು ಏರ್ಪಡಿಸಿದರು. ಅವರ ಜೊತೆ ಲಕ್ಷ್ಮೀದೀದಿ, ಮಾಸ್ಟರ್ ಮಹಾಶಯರ ಪತ್ನಿ, ಸ್ವಾಮಿ ಯೋಗಾನಂದರು, ಸ್ವಾಮಿ ಅದ್ಭುತಾನಂದರು, ಸ್ವಾಮಿ ಅಭೇದಾನಂದರು ಮತ್ತು ಗೋಲಾಪ್‌ಮಾ ಸಹ ಇದ್ದರು. ಶ್ರೀಮಾತೆಯವರು ಮೊದಲು ವಾರಾಣಸಿಗೆ ಹೋಗಿ ನಂತರ ಬೃಂದಾವನದಲ್ಲಿ ಸುಮಾರು ಒಂದು ವರ್ಷದ ಕಾಲ ಜಪ, ಧ್ಯಾನದಲ್ಲಿ ನಿರತರಾಗಿದ್ದರು. ಅವರು ಗೋಲಾಪ್‌ಮಾ ಬಗ್ಗೆ ಹೀಗೆ ಹೇಳುತ್ತಾರೆ: "ಗೋಲಾಪ್ ಅತ್ಯಂತ ಪರಿಶುದ್ಧ ಹೃದಯದವರು. ಶ್ರೀಕೃಷ್ಣನ ದೇವಸ್ಥಾನದಲ್ಲಿ ಒಂದು ಮಗು ಹೊಲಸು ಮಾಡಿದಾಗ, ಸ್ವಚ್ಛ ಮಾಡಲು ಯಾರೂ ಮುಂದೆ ಬರಲಿಲ್ಲ. ಗೋಲಾಪ್ ತಮ್ಮ ಸೀರೆಯನ್ನೇ ಹರಿದು ಆ ಜಾಗವನ್ನು ಸ್ವಚ್ಛ ಮಾಡಿದರು. ಅಲ್ಲಿ ನೆರೆದಿದ್ದ ಭಕ್ತರು ಆ ಮಗು ಇವರದ್ದೇ ಎಂದು ಭಾವಿಸಿ, ನಂತರ ಅಲ್ಲವೆಂದು ತಿಳಿದು, 'ಮಹಾತ್ಮರು ಕೇವಲ ಇತರರಿಗೋಸ್ಕರ ಜನ್ಮ ತಾಳುತ್ತಾರೆ' ಎಂದು ತಿಳಿದುಕೊಂಡರು.' "

ಶ್ರೀಮಾತೆಯವರು ಸ್ವಭಾವತಃ ಸಂಕೋಚ ಸ್ವಭಾವದವರು. ಯಾರಾದರೂ ಪುರುಷರು ಬಂದರೆ ಗೋಲಾಪ್‌ಮಾ ಮೂಲಕವೇ ಸಂಭಾಷಣೆ ನಡೆಸುತ್ತಿದ್ದರು. ಶ್ರೀಮಾತೆಯವರನ್ನು ನೋಡಲು ಅನೇಕ ತರಹದ ವಿಚಿತ್ರ ಸ್ವಭಾವದ ಭಕ್ತರುಗಳು ಬರುತ್ತಿದ್ದರು. ಅವರನ್ನೆಲ್ಲ ಗೋಲಾಪ್‌ಮಾ ಬಹಳ ಚೆನ್ನಾಗಿ ನಿಭಾಯಿಸುತ್ತಿದ್ದರು.

ಗೋಲಾಪ್‌ಮಾ ಶ್ರೀಮಾತೆಯವರನ್ನು ಬಹಳ ಸೂಕ್ಷ್ಮವಾಗಿ ನೋಡಿಕೊಳ್ಳುತ್ತಿದ್ದರು. ಒಬ್ಬ ಭಕ್ತ ಪೂಜಾಸಾಮಗ್ರಿಗಳೊಂದಿಗೆ ಬಂದು, ಶ್ರೀಮಾತೆಯವರನ್ನು ಪೂಜಿಸಲು ಆರಂಭಿಸಿದ. ಎಷ್ಟು ಸಮಯವಾದರೂ ಏಳಲೇ ಇಲ್ಲ. ಶ್ರೀಮಾತೆಯವರಿಗೂ ಬೇಸರವಾಯಿತು. ಆದರೆ ಹೇಳುವಂತಿಲ್ಲ. ಆಗ ಗೋಲಾಪ್‌ಮಾ ಆ ಭಕ್ತನನ್ನು ಗದರಿಸಿ, "ಏನು, ನೀನು ಒಂದು ಮರದ ವಿಗ್ರಹವನ್ನು ಪೂಜಿಸುತ್ತಿದ್ದೀಯೆಂದು ಭಾವಿಸಿದೆಯಾ? ಮಾತೆಯವರು ಬೆವರುತ್ತಿದ್ದಾರೆ" ಎಂದು ಹೇಳಿ ಅವನನ್ನು ಹೊರಕ್ಕೆ ಕಳುಹಿಸಿದರು. "ಗೋಲಾಪ್ ಇಲ್ಲದೆ ನಾನು ಎಂದೂ ಹೊರಗೆ ಹೋಗಲಾರೆ. ಅವಳು ನನ್ನ ಜೊತೆಗಿದ್ದರೆ ನನಗೆ ಧೈರ್ಯ ಮತ್ತು ವಿಶ್ವಾಸ" ಎಂದು ಶ್ರೀಮಾತೆ ಹೇಳುತ್ತಿದ್ದರು. ಕೋಚ್ ಗಾಡಿಯಲ್ಲಿ ಹೋದರೆ ಗೋಲಾಪ್‌ಮಾ ಶ್ರೀಮಾತೆಯವರ ಕೈಹಿಡಿದು ಹತ್ತಿಸಿ ನಂತರ ಇಳಿಸುತ್ತಿದ್ದರು. ಗೋಲಾಪ್‌ಮಾ ಶ್ರೀಮಾತೆಯವರ ಜೊತೆಯಲ್ಲಿ ಪುರಿ, ಪ್ರಯಾಗ, ಹರಿದ್ವಾರ, ರಾಮೇಶ್ವರ ಮುಂತಾದ ಹಲವಾರು ಪುಣ್ಯಕ್ಷೇತ್ರಗಳಿಗೆ ಹೋಗಿಬಂದರು.

ಗೋಲಾಪ್‌ಮಾ ಸ್ವಲ್ಪ ಕಠೋರ ಮತ್ತು ನಿಷ್ಠುರ ಸ್ವಭಾವದವರು. ಕೆಲವು ವೇಳೆ ಕಠಿಣವಾಗಿ ಮಾತನಾಡುತ್ತಿದ್ದರು. ಇದರಿಂದ ಮನನೊಂದ ಭಕ್ತರಿಗೆ ಆಮೇಲೆ ತಿಂಡಿಯನ್ನು ತಿನ್ನಿಸಿ ಅವರ ಕ್ಷಮೆ ಯಾಚಿಸುತ್ತಿದ್ದರು. ಮೃದುಹೃದಯದವರಾದ ಇವರು ಕಷ್ಟದಲ್ಲಿದ್ದವರನ್ನು ಕಂಡು ಮರುಗುತ್ತಿದ್ದರು. ಇವರ ಎಲ್ಲ ಕೆಲಸದಲ್ಲಿಯೂ ಶಿಸ್ತು ಎದ್ದು ಕಾಣುತ್ತಿತ್ತು. ಮನೆಯ ಪ್ರತಿಯೊಂದು ಭಾಗವನ್ನೂ ಅಚ್ಚುಕಟ್ಟಾಗಿ ಇಡುತ್ತಿದ್ದರು. ತರಕಾರಿ ಸಿಪ್ಪೆಯನ್ನು ಹಸುಗಳಿಗೆ ಕೊಡುತ್ತಿದ್ದರು. ಯಾರಾದರೂ ಅಡುಗೆ ಪದಾರ್ಥವನ್ನು ವ್ಯರ್ಥಮಾಡಿದರೆ ಸಿಡುಕುತ್ತಿದ್ದರು. ಆಗ ಶ್ರೀಮಾತೆಯವರು, "ನೋಡು ಗೋಲಾಪ್, ಸತ್ಯವಾದರೂ ಅಪ್ರಿಯವಾದರೆ ಅದನ್ನು ಹೇಳಬೇಡ. ಇದರಿಂದ ಭಕ್ತರ ಮನಸ್ಸು ನೋಯುತ್ತದೆ" ಎಂದು ಬುದ್ಧಿವಾದ ಹೇಳುತ್ತಿದ್ದರು.

ಆಚಾರಶೀಲರಾದ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ್ದ ಗೋಲಾಪ್‌ಮಾ ಎಂತಹ ಅಲ್ಪ ಕೆಲಸವನ್ನು ಮಾಡಲೂ ಹಿಂಜರಿಯುತ್ತಿರಲಿಲ್ಲ. ಇದರಿಂದ ಅವರು ಕೆಲವು ವೇಳೆ ಪುನಃ ಸ್ನಾನ ಮಾಡಬೇಕಾಗುತ್ತಿತ್ತು. ಆದರೆ ಅವರು ಹಾಗೆ ಮಾಡುತ್ತಿರಲಿಲ್ಲ. ಶ್ರೀಮಾತೆಯವರ ನೆಂಟಳಾದ ನಳಿನಿ ಇವರಿಗೆ ಸ್ನಾನ ಮಾಡುವಂತೆ ಒಮ್ಮೆ ಹೇಳಿದಾಗ, "ಶ್ರೀಮಾತೆಯವರು ಪವಿತ್ರ ಗಂಗೆಯಂತೆ. ಅವರನ್ನು ಮುಟ್ಟಿದ ಮೇಲೆ ಮತ್ತೊಮ್ಮೆ ಗಂಗಾಸ್ನಾನದ ಆವಶ್ಯಕತೆ ಏಕೆ?" ಎಂದರಂತೆ. ಶ್ರೀಮಾತೆಯವರು ದೈವೀಸಂಭೂತರೆಂದೂ, ಸಾಕ್ಷಾತ್ ಭಗವತಿಯೇ ಈ ರೂಪ ತಾಳಿರುವರೆಂದೂ ಗೋಲಾಪ್‌ಮಾ ಚೆನ್ನಾಗಿ ಅರಿತಿದ್ದರು.

ಶ್ರೀಮಾತೆಯವರು ಗೋಲಾಪ್‌ಮಾ ಅವರ ದೈನಂದಿನ ದಿನಚರಿಯನ್ನು ತುಂಬ ಮೆಚ್ಚಿಕೊಳ್ಳುತ್ತಿದ್ದರು. 'ಉದ್ಬೋಧನ'ದಲ್ಲಿ ಇರುವಾಗ ಪ್ರಾತಃಕಾಲ ೪ ಗಂಟೆಗೆ ಎದ್ದು, ಮೂರು ಗಂಟೆಗಳ ಕಾಲ ತಮ್ಮ ಕೊಠಡಿಯಲ್ಲಿ ಕುಳಿತು, ಜಪ ಧ್ಯಾನ ಮಾಡುತ್ತಿದ್ದರು. ಅನಂತರ ಅಡುಗೆ ಕೆಲಸ. ಆಮೇಲೆ ಶ್ರೀಮಾತೆಯವರನ್ನು ಗಂಗಾಸ್ನಾನಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಪ್ರತಿನಿತ್ಯ ಭಕ್ತರಿಗೋಸ್ಕರ ನೂರಾರು ವೀಳ್ಯ ಮಾಡುತ್ತಿದ್ದರು. ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡಿದ ನಂತರ ಪ್ರಸಾದವನ್ನು ಶ್ರೀಮಾತೆಯವರಿಗೆ ಸ್ವಲ್ಪ ತೆಗೆದಿಟ್ಟು, ಉಳಿದುದನ್ನು ಭಕ್ತರಿಗೆ ಹಂಚುತ್ತಿದ್ದರು. ಮಧ್ಯಾಹ್ನ ಸ್ವಲ್ಪ ವಿರಾಮ. ಇದಾದ ಮೇಲೆ ಭಗವದ್ಗೀತೆ, ರಾಮಾಯಣ, ಶ್ರೀರಾಮಕೃಷ್ಣರ ಅಥವಾ ಸ್ವಾಮಿ ವಿವೇಕಾನಂದರ ಜೀವನಕಥೆಯನ್ನು ಓದುತ್ತಿದ್ದರು. ಇವರು ಯಾವ ಪದಾರ್ಥವನ್ನೂ ನಷ್ಟ ಮಾಡುತ್ತಿರಲಿಲ್ಲ. ಕಿತ್ತಲೆ ಹಣ್ಣಿನ ಮತ್ತು ಕಬ್ಬಿನ ಸಿಪ್ಪೆಯನ್ನು ಕೂಡ ಅಡುಗೆ ಮಾಡುವುದಕ್ಕೆ ಉರುವಲಿನಂತೆ ಉಪಯೋಗಿಸುತ್ತಿದ್ದರು.

ಗೋಲಾಪ್‌ಮಾ ಅತ್ಯಂತ ಸರಳ ಜೀವನವನ್ನು ನಡೆಸುತ್ತ ಎಲ್ಲರಿಗಾಗಿ ಮರುಗುತ್ತಿದ್ದರು. ಅವರ ಮೊಮ್ಮಗ ಅವರ ಖರ್ಚಿಗಾಗಿ ಪ್ರತಿ ತಿಂಗಳೂ ಸ್ವಲ್ಪ ಹಣವನ್ನು ಕಳುಹಿಸುತ್ತಿದ್ದನು. ಅದರಲ್ಲಿ ಅವರು ತಮ್ಮ ಊಟದ ಖರ್ಚನ್ನು 'ಉದ್ಬೋಧನ' ಕಛೇರಿಗೆ ಕೊಟ್ಟು ಉಳಿದುದನ್ನು ಬಡವರಿಗೆ ದಾನ ಮಾಡಿಬಿಡುತ್ತಿದ್ದರು. ಭಕ್ತರಲ್ಲಿ ಯಾರಾದರೂ ವೈದ್ಯರಾಗಿದ್ದರೆ, ಖಾಯಿಲೆಯಿಂದ ನರಳುತ್ತಿದ್ದ ದೀನದಲಿತರಿಗೆ ಮತ್ತು ಬಡವರಿಗೆ ವೈದ್ಯಕೀಯ ನೆರವು ನೀಡುವಂತೆ ಹೇಳುತ್ತಿದ್ದರು.

ತಮ್ಮ ಜೊತೆಯಲ್ಲಿ ಇದ್ದ ಗೋಲಾಪ್‌ಮಾ ಬಗ್ಗೆ, ಶ್ರೀಮಾತೆಯವರಿಗೆ ಅಪಾರ ಗೌರವ ಇತ್ತು. ಒಮ್ಮೆ ಒಬ್ಬ ಭಕ್ತೆ ಶ್ರೀಮಾತೆಯವರಿಗೆ ನಮಸ್ಕರಿಸಲು ಬಂದಾಗ, ಗೋಲಾಪ್‌ಮಾ ಅವರ ದೃಢಕಾಯವನ್ನು ನೋಡಿ, ಅವರೇ ಶ್ರೀಮಾತೆಯವರು ಎಂದು ಭಾವಿಸಿ ನಮಸ್ಕರಿಸಲು ಹೋದರು. ಆಗ ಗೋಲಾಪ್‌ಮಾ ಶ್ರೀಮಾತೆಯವರ ಕಡೆ ಕೈ ತೋರಿಸಿದರು. ಶ್ರೀಮಾತೆಯವರು ತಮಾಷೆ ಮಾಡುವಂತೆ ಪುನಃ ಗೋಲಾಪ್‌ಮಾ ಕಡೆ ಕೈ ತೋರಿಸಿದರು. ಹೀಗೆ ಎರಡು ಮೂರು ಬಾರಿ ಆದ ಮೇಲೆ ಗೋಲಾಪ್, "ಏನು, ನೀವು ಭಗವತಿಯ ಸ್ವರೂಪವನ್ನು ನನ್ನಂತಹ ಸಾಧಾರಣ ಭಕ್ತೆಯಲ್ಲಿ ಕಾಣಬಲ್ಲಿರಾ?" ಎಂದು ಆ ಮಹಿಳೆಗೆ ಹೇಳಿ, ಶ್ರೀಮಾತೆಯವರಿಗೆ ನಮಸ್ಕರಿಸಲು ಹೇಳಿದರು.

ಶ್ರೀಮಾತೆಯವರು ೧೯೨೦ ರ ಜುಲೈ ೨೧ರಂದು ದೇಹತ್ಯಾಗ ಮಾಡಿದ ನಂತರ ಗೋಲಾಪ್‌ಮಾ ನಾಲ್ಕು ವರ್ಷಗಳ ಕಾಲ ಮಾತ್ರ ಬದುಕಿದ್ದರು. ಅವರಿಗೆ ಹೃದಯದ ಖಾಯಿಲೆ ಬಂದು ಆರೋಗ್ಯ ತುಂಬ ಹದಗೆಟ್ಟಿತು. ದೇಹತ್ಯಾಗ ಮಾಡುವುದಕ್ಕೆ ಮುಂಚೆ ಒಬ್ಬ ಸಂನ್ಯಾಸಿಯನ್ನು ಕರೆದು, "ಬಹುಶಃ ಈ ದೇಹ ಹೆಚ್ಚು ಕಾಲ ಇರುವಂತೆ ಕಾಣುವುದಿಲ್ಲ. ನನ್ನ ದೇಹದಿಂದ ಒಂದು ಸಣ್ಣ ಹುಡುಗಿ ರುದ್ರಾಕ್ಷಿಮಾಲೆಯನ್ನು ಧರಿಸಿ ಕೈಯಲ್ಲಿ ತ್ರಿಶೂಲವನ್ನು ಹಿಡಿದು, ಹೊರಗೆ ಬರುತ್ತಿರುವಂತೆ